ಚಿಕ್ಕ ನಗರಗಳಿಗೆ ಅಭಿವೃದ್ಧಿ ಕೆಲಸಗಳಿಗೆ ಸರಕಾರದಿಂದಲೇ ಪೂರ್ತಿ ನೆರವು ನೀಡುವ ಬಗ್ಗೆ.

೧೪೦೧. ಶ್ರೀ ಸಿ. ಎಂ. ಉದಾಸಿ (ಹಾನಗಲ್).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಹಾನಗಲ್ಲಿನಲ್ಲಿ ನ್ಯಾಯಾಲಯದ ಕಟ್ಟಡಕ್ಕೆ ಸ್ಥಳ ವಶಪಡಿಸಿಕೊಂಡಿರುವುದು ಸರಕಾರದವರ ಗಮನದಲ್ಲಿಯೆ.

ಆ) ಈಗಿರುವ ಕಟ್ಟಡವನ್ನು ಖಾಲಿ ಮಾಡಲು ಮಾಲೀಕರು ತಿಳಿಸಿರುವರೆ.

ಇ) ಕಟ್ಟಡ ಕಟ್ಟಿಸಲು ಸರ್ಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇದೆ.

ಆ) ಹೌದು.

ಇ) ಹೌದು.

ಶ್ರೀ ಸಿ. ಎಮ್. ಉದಾಸಿ.— ಮಾನ್ಯ ಅಧ್ಯಕ್ಷರೇ, ಹಾನಗಲ್‌ನಲ್ಲಿರುವ ನ್ಯಾಯಾಲಯದ ಕಟ್ಟಡವನ್ನು ಖಾಲಿ ಮಾಡಲು ಕಟ್ಟಡದ ಮಾಲೀಕರು ನೋಟೀಸ್ ಕೊಟ್ಟಿದ್ದು ಅಲ್ಲಿನ ನಾಗರೀಕರಿಗೆ ಇದರಿಂದ ತೊಂದರೆಯಾಗಿದೆ. ಆದಷ್ಟು ಬೇಗ ನ್ಯಾಯಾಲಯಕ್ಕೆ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕೋರ್ಟ್ ಕಟ್ಟಡವನ್ನು ಕಟ್ಟಿಸುವುದಕ್ಕೆ ಸಂಬಂಧಪಟ್ಟ ಹಾಗೆ ಕಟ್ಟಡದ ನಕಾಶೆ ಮತ್ತು ಅಂದಾಜನ್ನು ಮುಂಜೂರು ಮಾಡಿಕೊಡಿಯೆಂದು ಎರಡು ಸಲ ಹೈಕೋರ್ಟ್‌ನವರಿಗೆ ಕಳುಹಿಸಲಾಗಿದೆ. ಆದು ಬಂದನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಈ ವರ್ಷ ಬಡ್ಜೆಟ್‌ನಲ್ಲಿ ಕೋರ್ಟ್ ಕಟ್ಟಡವನ್ನು ಕಟ್ಟಿಸುವುದಕ್ಕೆ ೧೦ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಆದಷ್ಟು ಬೇಗ ಹಣವನ್ನು ಒದಗಿಸಿ ಕೋರ್ಟ್ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಲಾಗುವುದೆಂದು ಹೇಳುತ್ತೇನೆ.

ಅಧ್ಯಕ್ಷರು.— ಶ್ರೀ ಆರ್. ವೆಂಕಟರಾಮಯ್ಯ (ಗೈರು ಹಾಜರಿ).—

ಶ್ರೀಮತಿ. ಮುಖ್ತಾರುನ್ನೀಸಾರವರ ಪ್ರಶ್ನೆ ಸಂಖ್ಯೆ ೫೨೦ (೧೨೩೪) ತಡೆಹಿಡಿಯಲಾಗಿದೆ.

ನಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಕಾರ್ಖಾನೆಯಿಂದ ಹೊರಬೀಳುವ ರಾಸಾಯನಿಕ ಪದಾರ್ಥಗಳನ್ನು ತಡೆಗಟ್ಟುವ ಬಗ್ಗೆ.

೧೪೬೪. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ತಾಲ್ಲೂಕಿನ ದಾಸನಪುರದ ಬಳಿ ಇರುವ ಶ್ರೀನಿವಾಸ ಬ್ಲೀಚಿಂಗ್ ಕಾರ್ಖಾನೆಯು ಯಾವಾಗ ತನ್ನ ಕಾರ್ಯವನ್ನು ಆರಂಭಿಸಿತು.

ಆ) ಈ ಕಾರ್ಖಾನೆಯಿಂದ ಹೊರಬೀಳುವ ರಾಸಾಯನಿಕ ಪದಾರ್ಥಗಳು ಆರೋಗ್ಯಕ್ಕೆ ಹಾನಿಕರವಾಗಿದ್ದು ಇವು ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ಸೇರುತ್ತಿದ್ದು ಇದನ್ನು ತಡೆಗಟ್ಟಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ.